# 2024-25 ಸೇತುಬಂಧ

(ಡಿ.ಎಸ್.ಇ.ಆರ್.ಟಿ ನೀಡಿದ ಕಲಿಕಾಫಲ ಆಧರಿಸಿ)

## ವಿಷಯ: ವಿಜ್ಞಾನ

## 10 ನೇ ತರಗತಿ

Scanned with OKEN Scanner

**ವಿಷಯ:– ವಿಜ್ಞಾನ** **ತರಗತಿ: 10**

==========================================================

| ಕ.ಫ | ಅಪೇಕ್ಷಿತಾ ಕಲಿಕಾ ಫಲಗಳು | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸ್ಥಾಯಿ ವಿದ್ಯುತ್ ಅರ್ಥವನ್ನು ಸ್ಮರಿಸುವರು, ವಿದ್ಯುತ್ ಪ್ರವಾಹದ ಬಗ್ಗೆ ತಿಳಿಯುವರು. ಸರಳ ವಿದ್ಯುತ್ ಮಂಡಲವನ್ನು ರಚಿಸುವರು.ವಿದ್ಯುತ್ ಶಕ್ತಿಯ ವಿವಿಧ ಪರಿಣಾಮಗಳನ್ನು ತಿಳಿಯುವರು. | **2** |
| 2 | ಕಾಂತದ ಅರ್ಥವನ್ನು ಸ್ಮರಿಸುವರು ಕಾಂತದ ಗುಣಗಳನ್ನು ತಿಳಿಯುವರು. ಕಾಂತೀಯ ಬಲ ರೇಖೆಗಳನ್ನು ಎಳೆಯುವರು. | **2** |
| 3 | ಬೆಳಕಿನ ಗುಣಲಕ್ಷಣಗಳನ್ನು ತಿಳಿಯುವರು. | **2** |
| 4 | ಶಕ್ತಿ ನಿತ್ಯತೆ ನಿಯಮ ನಿರೂಪಿಸುವರು, ಹಾಗೂ ವಿದ್ಯುತ್ ಶಕ್ತಿಯ ಸುಲಭ ಪರಿವರ್ತನೆಯನ್ನು ಪ್ರಶಂಸಿಸುವರು, ಚಲನಶಕ್ತಿ ಮತ್ತು ಪ್ರಚನ್ನ ಶಕ್ತಿಗಳನ್ನು ವ್ಯತ್ಯಾಸವಿಸುವರು. | **2** |
| 5 | ಪರಮಾಣುವಿನ ರಚನೆಯನ್ನು ಮತ್ತು ಗುಣಲಕ್ಷಣಗಳನ್ನು ವಿವರಿಸುವರು, ಧಾತುಗಳ ವೆಲೆನ್ಸಿ ಪರಾಮರ್ಶಿಸುವರು. | **2** |
| 6 | ರಾಸಾಯನಿಕ ಕ್ರಿಯೆಗಳ ವಿಧಗಳು, ಮತ್ತು ಬದಲಾವಣೆಗಳನ್ನು ವರ್ಗೀಕರಿಸುವರು. | **2** |
| 7 | ರಾಸಾಯನಿಕ ಬಂಧ, ಅಯಾನಿಕ್ ಮತ್ತು ಸಹವೇಲೆನ್ಸೀಯ ಬಂಧಗಳ, ಸಂಯುಕ್ತಗಳ ಗುಣಗಳನ್ನು ಪಟ್ಟಿ ಮಾಡುವವರು, ಲೋಹಗಳು ಅಲೋಹಗಳು ಭೌತ ಮತ್ತು ರಾಸಾಯನಿಕ ಗುಣಗಳ ಉಪಯೋಗಗಳನ್ನು ವಿವರಿಸುವರು. | **2** |
| 8 | ಜೀವಕೋಶ, ಅಂಗಾಂಶಗಳ ರಚನೆ ಮತ್ತು ಕಾರ್ಯವನ್ನು ವಿವರಿಸುವರು. | **2** |
| 9 | ಅನುಕೂಲಕಾರಿ ಮತ್ತು ರೋಗಕಾರಕ ಸೂಕ್ಷ್ಮಾಣು ಜೀವಿಗಳ ಬಗ್ಗೆ ತಿಳಿದು, ಆರೋಗ್ಯದ ಮಹತ್ವ ವಿವರಿಸುವರು. | **2** |
| 10 | ಮಾನವನ ಉಸಿರಾಟ ಕ್ರಿಯೆ ಮತ್ತು ರಕ್ತ ಪರಿಚಲನ ಕ್ರಿಯೆಗಳನ್ನು ವಿವರಿಸಿವರು. | **2** |
| | **ಒಟ್ಟು ಪ್ರಶ್ನೆಗಳು** | **20** |

Scanned with OKEN Scanner

**ವಿಷಯ:– ವಿಜ್ಞಾನ** **ತರಗತಿ: 10**

==========================================================

## ಸೇತುಬಂಧ ಪೂರ್ವ ಪರೀಕ್ಷೆ

**ಕ.ಫ–1**

1.1 ಸರಳ ವಿದ್ಯುತ್ ಮಂಡಲವನ್ನು ರಚಿಸಿ, ಭಾಗಗಳನ್ನು ಗುರ್ತಿಸಿ.

1.2 ಆವೇಶಗಳ ಎರಡು ವಿಧಗಳನ್ನು ಬರೆಯಿರಿ.

**ಕ.ಫ–2**

2.1 ಕಾಂತದ ವಿಧಗಳನ್ನು ಬರೆಯಿರಿ.

2.2 ಕಾಂತೀಯ ಬಲರೇಖೆಗಳ ಗುಣಲಕ್ಷಣಗಳನ್ನು ಪಟ್ಟಿಮಾಡಿ.

**ಕ.ಫ–3**

3.1 ಬೆಳಕಿನ ಪ್ರತಿಫಲನದ ಎರಡು ನಿಯಮಗಳನ್ನು ಬರೆಯಿರಿ.

3.2 ಪೀನ ದರ್ಪಣದಲ್ಲಿ ಉಂಟಾಗುವ ಪ್ರತಿಬಿಂಬದ ಲಕ್ಷಣಗಳನ್ನು ಪಟ್ಟಿಮಾಡಿ.

**ಕ.ಫ–4**

4.1 ಶಕ್ತಿ ನಿತ್ಯತೆಯ ನಿಯಮವನ್ನು ನಿರೂಪಿಸಿ.

4.2 ಪ್ರಚ್ಛನ್ನಶಕ್ತಿಗೆ ಎರಡು ಉದಾಹರಣೆ ಕೊಡಿ.

**ಕ.ಫ–5**

5.1 ಋಣಾವೇಶವುಳ್ಳ ಪರಮಾಣುವಿನ ಮೂಲಭೂತ ಕಣ ಯಾವುದು?

5.2 ಪರಮಾಣು ಸಂಖ್ಯೆ ಎಂದರೇನು? ಅದರ ಸಂಕೇತವನ್ನು ಬರೆಯಿರಿ.

**ಕ.ಫ–6**

6.1 ನಿಮ್ಮ ನಿತ್ಯ ಜೀವನದಲ್ಲಿ ನೋಡಿರುವ ಎರಡು ರಾಸಾಯನಿಕ ಕ್ರಿಯೆಗಳನ್ನು ಬರೆಯಿರಿ.

6.2 ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆಗೆ ಒಂದು ಉದಾಹರಣೆಕೊಡಿ.

**ಕ.ಫ–7**

7.1 ಲೋಹಗಳ ಭೌತಗುಣಗಳನ್ನು ಪಟ್ಟಿಮಾಡಿ.

7.2 ರಾಸಾಯನಿಕ ಬಂಧದ ಎರಡು ವಿಧಗಳನ್ನು ಬರೆಯಿರಿ.

**ಕ.ಫ–8**

8.1 ಪ್ರಾಣಿ ಅಂಗಾಂಶಗಳನ್ನು ಪಟ್ಟಿಮಾಡಿ.

8.2 ಕ್ಸೈಲಂ ಮತ್ತು ಪ್ಲೋಯಂನ ಕಾರ್ಯವೇನು?

**ಕ.ಫ–9**

9.1 ಹಾಲು ಮೊಸರಾಗಲು ಕಾರಣವಾದ ಬ್ಯಾಕ್ಟೀರಿಯವನ್ನು ಹೆಸರಿಸಿ.

9.2 ರೋಗಕಾರಕ ಸೂಕ್ಷ್ಮಾಣು ಜೀವಿಗಳಿಂದ ನಮಗೆ ಯಾವ ರೀತಿಯ ತೊಂದರೆ ಉಂಟಾಗುತ್ತದೆ.

**ಕ.ಫ–10**

10.1 ಉಸಿರಾಟ ಎಂದರೇನು? ಉಸಿರಾಟದ ಎರಡು ವಿಧಗಳನ್ನು ಹೆಸರಿಸಿ.

10.2 ಮಾನವ ಹೃದಯದ ನೀಳಛೇದ ನೋಟದ ಚಿತ್ರವನ್ನು ಬರೆದು ಭಾಗಗಳನ್ನು ಗುರ್ತಿಸಿ.


Scanned with OKEN Scanner

## ಸೇತುಬಂಧ ಪೂರ್ವ ಪರೀಕ್ಷೆ ಉತ್ತರ ಕೀಲಿಗಳು

**ಕ.ಫ–1**

**1.1 ಸರಳ ವಿದ್ಯುತ್ ಮಂಡಲವನ್ನು ರಚಿಸಿ,ಭಾಗಗಳನ್ನು ಗುರ್ತಿಸಿ.**

ಉತ್ತರ:




**1.2 ಆವೇಶಗಳ ಎರಡು ವಿಧಗಳನ್ನು ಬರೆಯಿರಿ.**

ಉತ್ತರ: ಧನ ಮತ್ತು ಋಣಾವೇಶ

**ಕ.ಫ–2**

**2.1 ಕಾಂತದ ವಿಧಗಳನ್ನು ಬರೆಯಿರಿ.**

ಉತ್ತರ: ದಂಡ ಕಾಂತ, ಸೂಜಿ ಕಾಂತ ಮತ್ತು ಕುದುರೆಲಾಳ ಕಾಂತ

**2.2 ಕಾಂತೀಯ ಬಲರೇಖೆಗಳ ಗುಣಲಕ್ಷಣಗಳನ್ನು ಪಟ್ಟಿಮಾಡಿ.**

ಉತ್ತರ:

- ಇವು ಆವೃತ ಜಾಲಗಳಾಗಿವೆ.
- ಇವು ಒಂದನ್ನೊಂದು ಸೇರಿಸುವುದಿಲ್ಲ.
- ಇವು ಉತ್ತರ ಧ್ರುವದಲ್ಲಿ ಉರ್ಜಿತವಾಗಿ ದಕ್ಷಿಣ ಧ್ರುವದಲ್ಲಿ ವಿಲೀನಗೊಳ್ಳುತ್ತವೆ.
- ಇವುಗಳ ಸಾಂದ್ರತೆ ಧೃವಗಳಲ್ಲಿ ಹೆಚ್ಚಾಗಿರುತ್ತದೆ.
- ಇವುಗಳ ಸಾಂದ್ರತೆಯು ಹೆಚ್ಚಾಗಿದ್ದಲ್ಲಿ ಕಾಂತಕ್ಷೇತ್ರದ ಬಲವು ಹೆಚ್ಚಾಗುತ್ತದೆ.

**ಕ.ಫ–3**

**3.1 ಬೆಳಕಿನ ಪ್ರತಿಫಲನದ ಎರಡು ನಿಯಮಗಳನ್ನು ಬರೆಯಿರಿ.**

ಉತ್ತರ: 1. ಪತನ ಕೋನವು ಪ್ರತಿಫಲನ ಕೋನಕ್ಕೆ ಸಮನಾಗಿರುತ್ತದೆ ಮತ್ತು

2. ಪತನ ಕಿರಣ, ಪತನ ಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ ಮತ್ತು ಪ್ರತಿಫಲಿತ ಕಿರಣ ಈ ಮೂರೂ ಒಂದೇ ಸಮತಲದಲ್ಲಿರುತ್ತವೆ.

**3.2 ಪೀನ ದರ್ಪಣದಲ್ಲಿ ಉಂಟಾಗುವ ಪ್ರತಿಬಿಂಬದ ಲಕ್ಷಣಗಳನ್ನು ಪಟ್ಟಿಮಾಡಿ.**

ಉತ್ತರ: ಸತ್ಯ ಮತ್ತು ತಲೆಕೆಳಗಾದ ಪ್ರತಿಬಿಂಬವನ್ನು ಉಂಟುಮಾಡುತ್ತದೆ.

**ಕ.ಫ–4**

**4.1 ಶಕ್ತಿ ನಿತ್ಯತೆಯ ನಿಯಮವನ್ನು ನಿರೂಪಿಸಿ.**

ಉತ್ತರ: ಶಕ್ತಿಯನ್ನು ಸೃಷ್ಟಿಸಲು ಸಾಧ್ಯವಿಲ್ಲ ಹಾಗೂ ಲಯಗೊಳಿಸಲು ಸಾಧ್ಯವಿಲ್ಲ. ಆದರೆ ಶಕ್ತಿಯನ್ನು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಬದಲಾಯಿಸಬಹುದು.ಬದಲಾವಣೆಗೆ ಮುಂಚೆ ಮತ್ತು ನಂತರ ಒಟ್ಟು ಶಕ್ತಿಯು ಯಾವಾಗಲೂ ಸ್ಥಿರವಾಗಿರುತ್ತದೆ. ಇದೇ ಶಕ್ತಿ ಸಂರಕ್ಷಣಾ ನಿಯಮ.

**4.2 ಪ್ರಚ್ಛನ್ನಶಕ್ತಿಗೆ ಎರಡು ಉದಾಹರಣೆ ಕೊಡಿ.**

ಉತ್ತರ: ಅಣೆಕಟ್ಟಿನಲ್ಲಿ ಸಂಗ್ರಹಿಸಿದ ನೀರು, ಎತ್ತರದ ಮರದಲ್ಲಿರುವ ತೆಂಗಿನಕಾಯಿಗಳು

Scanned with OKEN Scanner

**ಕ.ಘ–5**

**5.1 ಋಣಾವೇಶವುಳ್ಳ ಪರಮಾಣುವಿನ ಮೂಲಭೂತ ಕಣ ಯಾವುದು?**

ಉತ್ತರ: ಎಲೆಕ್ಟ್ರಾನ್

**5.2 ಪರಮಾಣು ಸಂಖ್ಯೆ ಎಂದರೇನು? ಅದರ ಸಂಕೇತವನ್ನು ಬರೆಯಿರಿ.**

ಉತ್ತರ: ಒಂದು ಪರಮಾಣುವಿನ ಪ್ರೋಟಾನ್‌ಗಳ ಸಂಖ್ಯೆಯನ್ನು ಪರಮಾಣು ಸಂಖ್ಯೆ ಎನ್ನುವರು. ಸಂಕೇತ– Z

**ಕ.ಘ–6**

**6.1 ನಿಮ್ಮ ನಿತ್ಯ ಜೀವನದಲ್ಲಿ ನೋಡಿರುವ ಎರಡು ರಾಸಾಯನಿಕ ಕ್ರಿಯೆಗಳನ್ನು ಬರೆಯಿರಿ.**

ಉತ್ತರ: ಹಾಲು ಮೊಸರಾಗುವುದು ಮತ್ತು ಸುಣ್ಣದ ತಿಳಿ ನೀರಿಗೆ ಬಾಯಿಯಿಂದ ಊದಿದಾಗ ಹಾಲಿನಂತೆ ಬೆಳ್ಳಗಾಗುವುದು.

**6.2 ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆಗೆ ಒಂದು ಉದಾಹರಣೆಕೊಡಿ.**

ಉತ್ತರ:

ಕಬ್ಬಿಣವು ತಾಮ್ರದ ಸಲ್ಫೇಟ್ ಜೊತೆ ವರ್ತಿಸಿ ಕಬ್ಬಿಣದ ಸಲ್ಫೇಟ್ ಮತ್ತು ತಾಮ್ರ ಉತ್ಪತ್ತಿ ಮಾಡುತ್ತದೆ.

Fe(s) + CuSO4 (aq) -------> FeSO4 (aq) + Cu(s)

(ತಾಮ್ರದ ಸಲ್ಫೇಟ್) (ಕಬ್ಬಿಣದ ಸಲ್ಫೇಟ್)

**ಕ.ಘ–7**

**7.1 ಲೋಹಗಳ ಭೌತಗುಣಗಳನ್ನು ಪಟ್ಟಿಮಾಡಿ.**

ಉತ್ತರ:

- ಸಾಮಾನ್ಯವಾಗಿ ಲೋಹಗಳು ಹೊಳಪುಳ್ಳ ಮೇಲ್ಮೈ ಹೊಂದಿರುತ್ತವೆ.
- ಸಾಮಾನ್ಯವಾಗಿ ಲೋಹಗಳು ಕಠಿಣವಾಗಿರುತ್ತವೆ ಹಾಗೂ ಘನ ಸ್ಥಿತಿಯಲ್ಲಿರುತ್ತವೆ.
- ಲೋಹಗಳು ಕುಟ್ಯತೆ ಮತ್ತು ತನ್ಯತೆ ಗುಣವನ್ನು ಹೊಂದಿವೆ.
- ಲೋಹಗಳು ಉಷ್ಣ ಮತ್ತು ವಿದ್ಯುತ್‌ನ ಉತ್ತಮ ವಾಹಕಗಳು.
- ಲೋಹಗಳು ಶಾಬ್ಧನ ಗುಣವನ್ನು ಹೊಂದಿವೆ.
- ಲೋಹಗಳು ಅತಿ ಹೆಚ್ಚಿನ ಕುದಿಬಿಂದು ಮತ್ತು ದ್ರವನಬಿಂದುಗಳನ್ನು ಹೊಂದಿವೆ.

**7.2 ರಾಸಾಯನಿಕ ಬಂಧದ ಎರಡು ವಿಧಗಳನ್ನು ಬರೆಯಿರಿ.**

ಉತ್ತರ: ಕೋವೆಲೆಂಟ್ ಬಂಧ ಮತ್ತು ಅಯಾನಿಕ್ ಬಂಧ

**ಕ.ಘ–8**

**8.1 ಪ್ರಾಣಿ ಅಂಗಾಂಶಗಳನ್ನು ಪಟ್ಟಿಮಾಡಿ.**

ಉತ್ತರ: ಅನುಲೇಪಕ ಅಂಗಾಂಶ, ಸಂಯೋಜಕ ಅಂಗಾಂಶ, ಸ್ನಾಯು ಅಂಗಾಂಶ, ನರ ಅಂಗಾಂಶ

**8.2 ಕ್ಸೈಲಂ ಮತ್ತು ಫ್ಲೋಯಂನ ಕಾರ್ಯವೇನು?**

ಉತ್ತರ: ಕ್ಸೈಲಂ ಸಸ್ಯಗಳ ಬೇರುಗಳಿಂದ ನೀರು ಮತ್ತು ಲವಣಗಳನ್ನು ಸಸ್ಯದ ಎಲ್ಲ ಭಾಗಗಳಿಗೆ ಸಾಗಿಸುತ್ತದೆ. ಫ್ಲೋಯಂ ಸಸ್ಯಗಳ ಎಲೆಯಗಳಲ್ಲಿ ತಯಾರಾದ ಆಹಾರವನ್ನು ಸಸ್ಯದ ಎಲ್ಲ ಭಾಗಗಳಿಗೆ ಸಾಗಿಸುತ್ತದೆ.

**ಕ.ಘ–9**

**9.1 ಹಾಲು ಮೊಸರಾಗಲು ಕಾರಣವಾದ ಬ್ಯಾಕ್ಟೀರಿಯಾವನ್ನು ಹೆಸರಿಸಿ.**

ಉತ್ತರ: ಲ್ಯೋಕ್ಟೋ ಬ್ಯಾಸಿಲಸ್

**9.2 ರೋಗಕಾರಕ ಸೂಕ್ಷ್ಮಾಣು ಜೀವಿಗಳಿಂದ ನಮಗೆ ಯಾವ ರೀತಿಯ ತೊಂದರೆ ಉಂಟಾಗುತ್ತದೆ.**

ಉತ್ತರ: ಮನುಷ್ಯ ಮತ್ತು ಪ್ರಾಣಿಗಳಿಗೆ ವಿವಿಧ ರೀತಿಯ ಕಾಯಿಲೆಗಳನ್ನು ಹರಡುತ್ತವೆ. ಸಸ್ಯಗಳಲ್ಲಿ ಕಂಡುಬರುವ ವಿವಿಧ ರೋಗಗಳಿಗೆ ಸೂಕ್ಷ್ಮಜೀವಿಗಳು ಕಾರಣವಾಗಿದೆ. ಆಹಾರ ಕಲುಷಿತವಾಗಲು ಕಾರಣವಾಗಿವೆ.

Scanned with OKEN Scanner


**ಕ.ಫ–10**

**10.1 ಉಸಿರಾಟ ಎಂದರೇನು? ಉಸಿರಾಟದ ಎರಡು ವಿಧಗಳನ್ನು ಹೆಸರಿಸಿ.**

ಉತ್ತರ: ಆಮ್ಲಜನಕವು ಆಹಾರವನ್ನು ಉತ್ಕರ್ಷಿಸಿ ಶಕ್ತಿ ಬಿಡುಗಡೆ ಮಾಡುವ ಕ್ರಿಯೆ.

| ಆಕ್ಸಿಜನ್ ಸಹಿತ ಉಸಿರಾಟ | ಆಕ್ಸಿಜನ್ ರಹಿತ ಉಸಿರಾಟ |
|---|---|
| 1. ಆಕ್ಸಿಜನ್ ಉಪಸ್ಥಿತಿಯಲ್ಲಿ ಜರಗುತ್ತದೆ. | 1. ಆಕ್ಸಿಜನ್ ಅನುಪಸ್ಥಿತಿಯಲ್ಲಿ ಜರಗುತ್ತದೆ. |
| 2. ಮೈಟೋಕಾಂಡ್ರಿಯಾದಲ್ಲಿ ಜರಗುತ್ತದೆ. | 2. ಯೀಸ್ಟ್‌ಕೋಶಗಳಲ್ಲಿ ಜರಗುತ್ತದೆ |
| 3. ಹೆಚ್ಚು ಶಕ್ತಿ ಬಿಡುಗಡೆಯಾಗುತ್ತದೆ. | 3. ಕಡಿಮೆ ಶಕ್ತಿ ಬಿಡುಗಡೆಯಾಗುತ್ತದೆ |
| 4. ಅಂತಿಮ ಉತ್ಪನ್ನಗಳು: ಕಾರ್ಬನ್ ಡೈ ಆಕ್ಸೈಡ್, ನೀರು | 4. ಅಂತಿಮ ಉತ್ಪನ್ನಗಳು : ಕಾರ್ಬನ್ ಡೈ ಆಕ್ಸೈಡ್, ಎಥನಾಲ್ |

**10.2 ಮಾನವ ಹೃದಯದ ನೀಳಛೇದ ನೋಟದ ಚಿತ್ರವನ್ನು ಬರೆದು ಭಾಗಗಳನ್ನು ಗುರ್ತಿಸಿ.**




ಮಾನವನ ಹೃದಯದ ನೀಳ ಛೇದ ನೋಟ

Scanned with OKEN Scanner

**ವಿಷಯ:– ವಿಜ್ಞಾನ** **ತರಗತಿ: 10**

==================================================================

## ಸೇತುಬಂಧ ಸಾಫಲ್ಯ ಪರೀಕ್ಷೆ

**ಕ.ಫ–1**

1.1 ಸರಳ ವಿದ್ಯುತ್ ಮಂಡಲವನ್ನು ರಚಿಸಲು ಬೇಕಾಗುವ ವಿದ್ಯುತ್ ಉಪಕರಣಗಳನ್ನು ಪಟ್ಟಿಮಾಡಿ.

1.2 ಸ್ಥಾಯಿವಿದ್ಯುತ್ ಉಂಟಾಗುವ ಎರಡು ಸನ್ನಿವೇಶಗಳನ್ನು ಬರೆಯಿರಿ.

**ಕ.ಫ–2**

2.1 ಕಾಂತದ ಗುಣಲಕ್ಷಣಗಳನ್ನು ಪಟ್ಟಿಮಾಡಿ.

1.2 ಒಂದು ದಂಡಕಾಂತವನ್ನು ಬರೆದು, ಅದಕ್ಕೆ ಕಾಂತೀಯ ಬಲರೇಖೆಗಳನ್ನು ಎಳೆಯಿರಿ.

**ಕ.ಫ–3**

3.1 ಬೆಳಕಿನ ವಕೀಭವನ ಉಂಟಾಗುವ ಎರಡು ಸನ್ನೀವೇಶಗಳನ್ನು ಬರೆಯಿರಿ.

3.2 ನಿಮ್ನ ದರ್ಪಣದಲ್ಲಿ ಉಂಟಾಗುವ ಪ್ರತಿಬಿಂದ ಲಕ್ಷಣಗಳನ್ನು ಪಟ್ಟಿಮಾಡಿ.

**ಕ.ಫ–4**

4.1 ವಿದ್ಯುತ್ ಶಕ್ತಿಯನ್ನು ನಾವು ಯಾವ ಸುಲಭಶಕ್ತಿಗಳಾಗಿ ಪರಿವರ್ತಿಸಬಹುದು,ಎರಡು ಉದಾಹರಣೆ ಕೊಡಿ.

4.2 ಪ್ರಚ್ಛನ್ನಶಕ್ತಿಯು ಚಲನಶಕ್ತಿಯಾಗಿ ಪರಿವರ್ತನೆಯಾಗುವ ಎರಡು ನಿದರ್ಶನಗಳನ್ನು ಕೊಡಿ.

**ಕ.ಫ–5**

5.1 ಪರಮಾಣುವಿನಲ್ಲಿ ಮೂಲಭೂತಕಣಗಳು ಹೇಗೆ ವಿತರಣೆಯಾಗಿವೆ.?

5.2 ಪರಮಾಣು ಸಂಖ್ಯೆ ಎಂದರೇನು? ಅದರ ಸಂಕೇತವನ್ನು ಬರೆಯಿರಿ.

**ಕ.ಫ–6**

6.1 ಯಾವುದಾದರೂ ಎರಡು ಭೌತ ಬದಲಾವಣೆಗಳನ್ನು ಪಟ್ಟಿಮಾಡಿ.

6.2 ರಾಸಾಯನಿಕ ಸಂಯೋಗ ಕ್ರಿಯೆಗೆ ಒಂದು ಉದಾಹರಣೆ ಕೊಡಿ.

**ಕ.ಫ–7**

7.1 ಲೋಹಗಳ ರಾಸಾಯನಿಕ ಗುಣಗಳನ್ನು ಪಟ್ಟಿಮಾಡಿ.

7.2 ನಮ್ಮ ನಿತ್ಯ ಜೀವನದಲ್ಲಿ ಬಳಸುವ 2 ಅಯಾನಿಕ್ ಸಂಯುಕ್ತಗಳನ್ನು ಹೆಸರಿಸಿ?

**ಕ.ಫ–8**

8.1 ಸಸ್ಯಜೀವಕೋಶದ ಚಿತ್ರ ಬರೆಯಿರಿ ಮತ್ತು ಭಾಗಗಳನ್ನು ಗುರ್ತಿಸಿ.

8.2 ಸಸ್ಯ ಅಂಗಾಶವಾದ ವರ್ಧನ ಅಂಗಾಂಶದ ಕಾರ್ಯವೇನು?

**ಕ.ಫ–9**

9.1 ಹುದುಗುವಿಕೆಗೆ ಕಾರಣವಾದ ಸೂಕ್ಷ್ಮಾಣು ಜೀವಿ ಯಾವುದು?

9.2 ಸೂಕ್ಷ್ಮಾಣು ಜೀವಿಗಳಿಂದ ನಮಗೆ ಯಾವ ರೀತಿಯ ಉಪಯೋಗಗಳಿವೆ?

**ಕ.ಫ–10**

10.1 ಇಮ್ಮಡಿ ರಕ್ತ ಪರಿಚಲನೆ ಎಂದರೇನು?

10.2 ಮಾನವ ಶ್ವಾಸಾಂಗವ್ಯೂಹದ ಚಿತ್ರವನ್ನು ಬರೆದು ಭಾಗಗಳನ್ನು ಗುರ್ತಿಸಿ.

Scanned with OKEN Scanner

ವಿಷಯ:– ವಿಜ್ಞಾನ ತರಗತಿ: 10

==========================================================

## ಸೇತುಬಂಧ ಸಾಫಲ್ಯ ಪರೀಕ್ಷೆ ಉತ್ತರ ಕೀಲಿಗಳು

**ಕ.ಫ–1**

**1.1 ಸರಳ ವಿದ್ಯುತ್ ಮಂಡಲವನ್ನು ರಚಿಸಲು ಬೇಕಾಗುವ ವಿದ್ಯುತ್ ಉಪಕರಣಗಳನ್ನು ಪಟ್ಟಿಮಾಡಿ.**

ಉತ್ತರ: ವಾಹಕ ತಂತಿ, ಸ್ವಿಚ್, ಬಲ್ಬ್ ಮತ್ತು ಶುಷ್ಕಕೋಶ.

**1.2 ಸ್ಥಾಯಿವಿದ್ಯುತ್ ಉಂಟಾಗುವ ಎರಡು ಸನ್ನೀವೇಶಗಳನ್ನು ಬರೆಯಿರಿ.**

ಉತ್ತರ: ಪ್ಲಾಸ್ಟಿಕ್ ಸ್ಕೇಲನ್ನು ಒಣ ಕೂದಲಿಗೆ ಉಜ್ಜಿ ಕಾಗದದ ಚೂರುಗಳ ಹತ್ತಿರ ತಂದಾಗ ಮತ್ತು ಗಾಳಿ ತುಂಬಿದ ಎರಡು ಬಲೂನ್‌ಗಳನ್ನು ಪರಸ್ಪರ ಉಜ್ಜಿ ಹತ್ತಿರ ತಂದಾಗ.


**ಕ.ಫ–2**

**2.1 ಕಾಂತದ ಗುಣಲಕ್ಷಣಗಳನ್ನು ಪಟ್ಟಿಮಾಡಿ.**

ಉತ್ತರ: ಕಾಂತದ ಸಜಾತಿ ಧ್ರುವಗಳು ಪರಸ್ಪರ ವಿಕರ್ಷಿಸುತ್ತವೆ. ಹಾಗೂ ವಿಜಾತಿ ಧ್ರುವಗಳು ಪರಸ್ಪರ ಆಕರ್ಷಿಸುತ್ತವೆ. ಸ್ವತಂತ್ರವಾಗಿ ತೂಗು ಬಿಟ್ಟ ಕಾಂತ ಉತ್ತರ ದಕ್ಷಿಣವಾಗಿ ನಿಲ್ಲುತ್ತದೆ.

**2.2 ಒಂದು ದಂಡಕಾಂತವನ್ನು ಬರೆದು, ಅದಕ್ಕೆ ಕಾಂತೀಯ ಬಲರೇಖೆಗಳನ್ನು ಎಳೆಯಿರಿ.**

ಉತ್ತರ:



**ಕ.ಫ–3**

**3.1 ಬೆಳಕಿನ ವಕೀಭವನದಿಂದಾಗುವ ಎರಡು ಸನ್ನೀವೇಶಗಳನ್ನು ಬರೆಯಿರಿ.**

ಉತ್ತರ: ಕಾಮನ ಬಿಲ್ಲು, ಆಕಾಶ ನೀಲಿ ಬಣ್ಣ ಕಾಣುವುದು.

**3.2 ನಿಮ್ನ ದರ್ಪಣದಲ್ಲಿ ಉಂಟಾಗುವ ಪ್ರತಿಬಿಂದ ಲಕ್ಷಣಗಳನ್ನು ಪಟ್ಟಿಮಾಡಿ.**

ಉತ್ತರ:

- ಬೆಳಕಿನ ಕಿರಣಗಳನ್ನು ವಿಕೇಂದ್ರಿಕರಿಸುತ್ತದೆ.
- ನೇರ ಮತ್ತು ಮಿತ್ಯ ಪ್ರತಿಬಿಂಬವನ್ನು ಉಂಟುಮಾಡುತ್ತದೆ.

**ಕ.ಫ–4**

**4.1 ವಿದ್ಯುತ್ ಶಕ್ತಿಯನ್ನು ನಾವು ಯಾವ ಸುಲಭಶಕ್ತಿಗಳಾಗಿ ಪರಿವರ್ತಿಸಬಹುದು,ಎರಡು ಉದಾಹರಣೆ ಕೊಡಿ.**

ಉತ್ತರ: ವಿದ್ಯುತ್ ಶಕ್ತಿಯನ್ನು ಬೆಳಕಿನ ಶಕ್ತಿಯಾಗಿ ಪರಿವರ್ತಿಸಬಹುದು. ಉದಾ– ವಿದ್ಯುತ್ ಬಲ್ಬ್

ವಿದ್ಯುತ್ ಶಕ್ತಿಯನ್ನು ಉಷ್ಣ ಶಕ್ತಿಯಾಗಿ ಪರಿವರ್ತಿಸಬಹುದು. ಉದಾ– ವಿದ್ಯುತ್ ಒಲೆ

**4.2 ಪ್ರಚ್ಛನ್ನಶಕ್ತಿಯು ಚಲನಶಕ್ತಿಯಾಗಿ ಪರಿವರ್ತನೆಯಾಗುವ ಎರಡು ನಿದರ್ಶನಗಳನ್ನು ಕೊಡಿ.**

ಉತ್ತರ: ಬಂದೂಕಿನಿಂದ ಹೊರಟ ಗುಂಡು.

ಅಣೆಕಟ್ಟುಗಳಿಂದ ಹೊರಬರುತ್ತಿರುವ ನೀರು.

**ಕ.ಫ–5**

**5.1 ಪರಮಾಣುವಿನಲ್ಲಿ ಮೂಲಭೂತಕಣಗಳು ಹೇಗೆ ವಿತರಣೆಯಾಗಿವೆ.?**

ಉತ್ತರ: ಪರಮಾಣುವಿನಲ್ಲಿ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳು ಪರಮಾಣುವಿನ ಬೀಜ ಕೇಂದ್ರದಲ್ಲಿದ್ದು, ಎಲೆಕ್ಟ್ರಾನ್‌ಗಳು ಬೀಜ ಕೇಂದ್ರದ ಸುತ್ತ ನಿರ್ದಿಷ್ಟ ಕಕ್ಷೆಯಲ್ಲಿ ಸುತ್ತುತ್ತಿರುತ್ತವೆ.

**5.2 ಪರಮಾಣು ಸಂಖ್ಯೆ ಎಂದರೇನು? ಅದರ ಸಂಕೇತವನ್ನು ಬರೆಯಿರಿ.**

Scanned with OKEN Scanner

ಉತ್ತರ: ಒಂದು ಪರಮಾಣುವಿನ ಪ್ರೋಟಾನ್‌ಗಳ ಸಂಖ್ಯೆಯನ್ನು ಪರಮಾಣು ಸಂಖ್ಯೆ ಎನ್ನುವರು. ಸಂಕೇತ– Z

**ಕ.ಘ–6**

**6.1 ಯಾವುದಾದರೂ ಎರಡು ಭೌತ ಬದಲಾವಣೆಗಳನ್ನು ಪಟ್ಟಿಮಾಡಿ.**

ಉತ್ತರ: ಕಡ್ಡಿಯನ್ನು ಮುರಿಯುವುದು ಮತ್ತು ನೀರು ಮಂಜುಗೆಡ್ಡೆಯಾಗುವುದು.

**6.2 ರಾಸಾಯನಿಕ ಸಂಯೋಗ ಕ್ರಿಯೆಗೆ ಒಂದು ಉದಾಹರಣೆ ಕೊಡಿ.**

ಉತ್ತರ: **$H_2$ (g)** ಮತ್ತು **$O_2$ (g)** ಗಳಿಂದ ನೀರು ಉಂಟಾಗುವುದು.

$$2H_2 (g) + O_2 (g) \rightarrow 2H_2O(l)$$

**ಕ.ಘ–7**

**7.1 ಲೋಹಗಳ ರಾಸಾಯನಿಕ ಗುಣಗಳನ್ನು ಪಟ್ಟಿಮಾಡಿ.**

ಉತ್ತರ:

- ಲೋಹ ವಿದ್ಯುಧನೀಯ.
- ಅಯಾನಿಕ್ ಬಂಧ ಹೊಂದಿವೆ.
- ನೀರಿನೊಂದಿಗೆ ವರ್ತಿಸಿ ಆಕ್ಸೈಡ್ ಮತ್ತು ಹೈಡ್ರಾಕ್ಸೈಡ್ ಉಂಟುಮಾಡುತ್ತವೆ.
- ಆಕ್ಸಿಜನ್‌ನೊಂದಿಗೆ ವರ್ತಿಸಿ ಪ್ರತ್ಯಾಮ್ಲೀಯ ಆಕ್ಸೈಡ್ ಉಂಟುಮಾಡುತ್ತವೆ.
- ಅಪಕರ್ಷಣಕಾರಿಗಳಂತೆ ವರ್ತಿಸುತ್ತವೆ.

**7.2 ನಮ್ಮ ನಿತ್ಯ ಜೀವನದಲ್ಲಿ ಬಳಸುವ 2 ಅಯಾನಿಕ್ ಸಂಯುಕ್ತಗಳನ್ನು ಹೆಸರಿಸಿ?**

ಉತ್ತರ: ಮೆಗ್ನಿಶಿಯಂ ಆಕ್ಸೈಡ್ ಮತ್ತು ಮೆಗ್ನಿಶಿಯಂ ಕ್ಲೋರೈಡ್

**ಕ.ಘ–8**

**8.1 ಸಸ್ಯಜೀವಕೋಶದ ಚಿತ್ರ ಬರೆಯಿರಿ ಮತ್ತು ಭಾಗಗಳನ್ನು ಗುರ್ತಿಸಿ.**

ಉತ್ತರ:

**8.2 ಸಸ್ಯ ಅಂಗಾಶವಾದ ವರ್ಧನ ಅಂಗಾಂಶದ ಕಾರ್ಯವೇನು?**

ಉತ್ತರ: ಸಸ್ಯದ ಕಾಂಡ ಮತ್ತು ಬೇರುಗಳ ತುದಿ ಬೆಳವಣಿಗೆಗೆ ಮತ್ತು ಕಾಂಡದ ದಪ್ಪ ಬೆಳವಣಿಗೆಗೆ ಕಾರಣವಾಗಿದೆ.

**ಕ.ಘ–9**

**9.1 ಹುದುಗುವಿಕೆಗೆ ಕಾರಣವಾದ ಸೂಕ್ಷ್ಮಾಣು ಜೀವಿ ಯಾವುದು?**

ಉತ್ತರ: ಶಿಲೀಂಧ್ರ

**9.2 ಸೂಕ್ಷ್ಮಾಣು ಜೀವಿಗಳಿಂದ ನಮಗೆ ಯಾವ ರೀತಿಯ ಉಪಯೋಗಗಳಿವೆ?**

ಉತ್ತರ: ಸೂಕ್ಷ್ಮಾಣು ಜೀವಿಗಳು ಹಾಲನ್ನು ಮೊಸರಾಗಿಸಲು ಸಹಾಯ ಮಾಡುತ್ತವೆ.
ಕೆಲವು ಸೂಕ್ಷ್ಮಾಣು ಜೀವಿಗಳು ಲಸಿಕೆ ತಯಾರಿಸಲು ಸಹಾಯಕವಾಗಿವೆ. ಮತ್ತು ಸೂಕ್ಷ್ಮಾಣು ಜೀವಿಗಳು ವಿವಿಧ ಬೇಕರಿ ಉದ್ಯಮಗಳಲ್ಲಿ ಬ್ರೆಡ್ ಮತ್ತು ಕೇಕ್ ತಯಾರಿಕೆಯಲ್ಲಿ ಬಳಸುತ್ತಾರೆ.

**ಕ.ಘ–10**

**10.1 ಇಮ್ಮಡಿ ರಕ್ತ ಪರಿಚಲನೆ ಎಂದರೇನು?**

ಉತ್ತರ: ದೇಹದಲ್ಲಿ ಒಂದು ಪರಿಚಲನೆಯನ್ನು ಪೂರ್ತಿಮಾಡಲು ರಕ್ತವು ಎರಡು ಬಾರಿ ಹೃದಯವನ್ನು ಹಾದುಹೋಗುತ್ತದೆ. ಇದನ್ನು ಇಮ್ಮಡಿ ಪರಿಚಲನೆ ಎನ್ನುವರು.

**10.2 ಮಾನವ ಶ್ವಾಸಾಂಗವ್ಯೂಹದ ಚಿತ್ರವನ್ನು ಬರೆದು ಭಾಗಗಳನ್ನು ಗುರ್ತಿಸಿ.**

ಉತ್ತರ:

Scanned with OKEN Scanner

# ನಮೂನೆ– 4(ಬಿ) : ಸೇತುಬಂಧ ಪೂರ್ವ ಮತ್ತು ಸಾಫಲ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳ ವಿಶ್ಲೇಷಣೆ

ತರಗತಿ:–

**2024–25**

ವಿಷಯ : ವಿಜ್ಞಾನ

| ಕ್ರ. ಸಂ) | ವಿದ್ಯಾರ್ಥಿ ಹೆಸರು | ಪರೀಕ್ಷೆ | ಅಪೇಕ್ಷಿತ ಕಲಿಕಾಫಲ ಸಂಖ್ಯೆ ಮತ್ತು ಪ್ರಶ್ನೆ ಸಂಖ್ಯೆ | | | | | | | | | | | | | | | | | | | | ಒಟ್ಟು ಗಳಿಸಿದ ಸಾಮರ್ಥ್ಯಗಳು | ಒಟ್ಟು ಗಳಿಸದಿರುವ ಸಾಮರ್ಥ್ಯಗಳು |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | ಕ.ಫ–1 | | ಕ.ಫ–2 | | ಕ.ಫ–3 | | ಕ.ಫ–4 | | ಕ.ಫ–5 | | ಕ.ಫ–6 | | ಕ.ಫ–7 | | ಕ.ಫ–8 | | ಕ.ಫ–9 | | ಕ.ಫ–10 | | | |
| | | | 1.1 | 1.2 | 2.1 | 2.2 | 3.1 | 3.2 | 4.1 | 4.2 | 5.1 | 5.2 | 6.1 | 6.2 | 7.1 | 7.2 | 8.1 | 8.2 | 9.1 | 9.2 | 10.1 | 10.2 | | |
| | | ಪೂ | | | | | | | | | | | | | | | | | | | | | | |
| | | ಸಾ | | | | | | | | | | | | | | | | | | | | | | |
| | | ಪೂ | | | | | | | | | | | | | | | | | | | | | | |
| | | ಸಾ | | | | | | | | | | | | | | | | | | | | | | |
| | | ಪೂ | | | | | | | | | | | | | | | | | | | | | | |
| | | ಸಾ | | | | | | | | | | | | | | | | | | | | | | |
| | | ಪೂ | | | | | | | | | | | | | | | | | | | | | | |
| | | ಸಾ | | | | | | | | | | | | | | | | | | | | | | |
| | | ಪೂ | | | | | | | | | | | | | | | | | | | | | | |
| | | ಸಾ | | | | | | | | | | | | | | | | | | | | | | |
| | | ಪೂ | | | | | | | | | | | | | | | | | | | | | | |
| | | ಸಾ | | | | | | | | | | | | | | | | | | | | | | |
| | | ಪೂ | | | | | | | | | | | | | | | | | | | | | | |
| | | ಸಾ | | | | | | | | | | | | | | | | | | | | | | |
| | | ಪೂ | | | | | | | | | | | | | | | | | | | | | | |
| | | ಸಾ | | | | | | | | | | | | | | | | | | | | | | |
| | ಒಟ್ಟು– A | | | | | | | | | | | | | | | | | | | | | | | |
| | ಒಟ್ಟು– B | | | | | | | | | | | | | | | | | | | | | | | |

**A** -ಪೂರ್ಣ ಸರಿ ಉತ್ತರ, **B**– ಭಾಗಶಃ ಸರಿ ಉತ್ತರ/ ತಪ್ಪು ಉತ್ತರ/ ನಿರುತ್ತರ

Scanned with OKEN Scanner